ಮಂತ್ರಿಗಳಿಂದ ಭಿಕ್ಷಾಟನೆ ಮಾಡುವುದನ್ನು ನಿಷೇಧ ಮಾಡಬೇಕು. ಏಕೆಂದರೆ, ಪ್ರತಿ ಪ್ರಶ್ನೆ ಕೇಳಿದಾಗಲೂ ಅದು ಹಸ್ತಾಂತರವಾಗಿದೆ, ಇಲ್ಲ ಅಂದರೆ ಉತ್ತರ ಮುಂದೆ ಕೊಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ನಾವು ಭಿಕ್ಷೆ ಬೇಡುವಂತಹ ಪರಿಸ್ಥಿತಿಯಾಗಿದೆ. ಇದು ಭಿಕ್ಷಾಟನೆಗೆ ಸಂಬಂಧಪಟ್ಟ ಒಂದು ಪ್ರಶ್ನೆ. ಈ ಸದನದಲ್ಲಿ ಭಿಕ್ಷಾಟನೆಯನ್ನು ಪ್ರಥಮ ಹಂತದಲ್ಲಿ ನಿಷೇಧ ಮಾಡಬೇಕು ಮಂತ್ರಿಗಳಲ್ಲಿ ನಾವು ಭಿಕ್ಷಾಟನೆಗೆ ಉತ್ತರ ಕೇಳುವಂತಹ ಭಿಕ್ಷೆಯನ್ನು ನಿಲ್ಲಿಸಲು, ತಾವು ಈ ಸಂದರ್ಭದಲ್ಲಿ ನಮ್ಮನ್ನು ರಕ್ಷಣೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು: ಆಗಬಹುದು. ಭಿಕ್ಷಾಟನೆಯನ್ನು ತಡೆಗಟ್ಟುತ್ತೇವೆ.

ವಿಷಯ: ಗದಗ್‌ನಲ್ಲಿ ಕೆ.ಹೆಚ್.ಪಾಟೀಲ್ ಕ್ರೀಡಾಂಗಣದ ನಿರ್ಮಾಣ ಕೆಲಸ.

514 (3432)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗದಲ್ಲಿ ನಿರ್ಮಾಣವಾಗುತ್ತಿರುವ ಕೆ.ಎಚ್.ಪಾಟೀಲ್ ಕ್ರೀಡಾಂಗಣದ ನಿರ್ಮಾಣ ಕಾರ್ಯವು ಈಗ ಯಾವ ಹಂತದಲ್ಲಿದೆ?

ಆ) ಈ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಕೊಡ ಬೇಕಾದ ವಂತಿಕೆ ಎಷ್ಟು? ಇದರಲ್ಲಿ ಈ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು?

ಇ) ಈ ಕ್ರೀಡಾಂಗಣ ನಿರ್ಮಾಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡಬೇಕಾದ ಪೂರ್ಣ ಹಣ ಯಾವಾಗ ಬಿಡುಗಡೆ ಮಾಡಲಾಗುವುದು? ಈ ಕುರಿತು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಗದಗದಲ್ಲಿ ನಿರ್ಮಾಣವಾಗುತ್ತಿರುವ ಕೆ.ಎಚ್.ಪಾಟೀಲ್ ಕ್ರೀಡಾಂಗಣದ ನೆಲ ಸಮತಟ್ಟು ಮಾಡುವ ಕೆಲಸ ಪೂರ್ಣಗೊಂಡಿದೆ. ಪೆವಿಲಿಯನ್ ಕಟ್ಟಡ, ನೆಲಮಹಡಿ, ನಿರ್ಮಾಣ ಪೂರ್ಣ ಗೊಂಡಿದೆ ಹಾಗೂ ಮೊದಲ ಮಹಡಿ ನಿರ್ಮಾಣ ಭಾಗಶಃ ಮುಗಿದಿದೆ.

ಆ) ಈ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರದಿಂದ ರೂ. 12.00 ಲಕ್ಷಗಳನ್ನು

ಮಂಜೂರು ಮಾಡಿ ಮೊದಲ ಕಂತಿನ ಅನುದಾನವಾಗಿ ರೂ. 10.80 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯತ್ ಯೋಜನೆಯಡಿ ರೂ. 10.00 ಲಕ್ಷಗಳನ್ನು ವಿಶೇಷ ಅನುದಾನವಾಗಿ ರಾಜ್ಯ ವಲಯದಡಿ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ಕ್ರೀಡಾಂಗಣ ನಿರ್ಮಾಣಕ್ಕೆ ರಾಜ್ಯ ಸರ್ಕಾರ ತನ್ನ ವಂತಿಕೆಯನ್ನು ಈಗಾಗಲೇ ಬಿಡುಗಡೆ ಮಾಡಿದ್ದು ವಿನಿಯೋಗವಾಗಿರುತ್ತದೆ. ಹಾಗೂ ಕೇಂದ್ರ ಸರ್ಕಾರದ ಅನುದಾನದ ರೂ. 1.20 ಲಕ್ಷ ಎರಡನೇ ಕಂತಿನ ಹಣ ಬಿಡುಗಡೆ ಮಾಡಬೇಕಾಗಿದ್ದು ಮೊದಲನೆ ಕಂತಿನ ಅನುದಾನ ರೂ. 10.80 ಲಕ್ಷ ಪೂರ್ಣ ವಿನಿಯೋಗದ ನಂತರ ಉಪಯುಕ್ತತಾ ಪತ್ರ, ಪ್ರಗತಿ ವರದಿ ಸಲ್ಲಿಸಿ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ಆರ್.ಪಾಟೀಲ್: ನೀವು ಕೇಂದ್ರಸರ್ಕಾರದ ಹಣವನ್ನು ಬಿಡುಗಡೆ ಮಾಡಿದ್ದೀರಿ, ಬಹಳ ಸಂತೋಷ. ಆದರೆ ಈಗ ಅಲ್ಲಿ ಪ್ರತಿನಿತ್ಯ ಆಟ ನಡೆಯುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು. ಸಾಕಷ್ಟು ಹಣವನ್ನುಖರ್ಚು ಮಾಡಿ ಕ್ರೀಡಾಂಗಣ ನಿರ್ಮಾಣ ಮಾಡಿದ್ದೀರಿ. ಅದು ಟ್ರಾಕ್ ಲೇ ಔಟ್ ಆಗುವ ಹಾಗೆ ಮಾಡಿ. ಮತ್ತು ನಮಗೆ ಶಾಶ್ವತವಾಗಿ ಒಬ್ಬ ತರಬೇತಿದಾರರನ್ನು ಕೊಡಿ. ಇಲ್ಲ ಅಂದರೆ ಕಡೆಗೆ ನಿಮ್ಮ ಕಂಠೀರವ ಕ್ರೀಡಾಂಗಣದಿಂದ ತಿಂಗಳಿಗೆ ಒಂದಾದರೂ ಗೇಮ್ಸ್ ಬಗ್ಗೆ ಕೋಚ್ ನಡೆಯುವ ಹಾಗೆ ಮಾಡಿ, ಅಲ್ಲಿ ಸ್ವಲ್ಪ ಆಟ ನಡೆಯುವ ಹಾಗೆ ಮಾಡಿದರೆ ಒಳ್ಳೆಯದು. ಏಕೆಂದರೆ ಈಗ ಬರೀ ರಾಜಕೀಯ ಸಭೆಗಳು ನಡೆಯುವುದಕ್ಕೆ ಮಾತ್ರ ಕ್ರೀಡಾಂಗಣವಾಗಿದೆ. ಅದಕ್ಕೆ ದಯವಿಟ್ಟು ಈ ವ್ಯವಸ್ಥೆಯನ್ನು ಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಎರಡನೆಯದಾಗಿ ಗದಗ್ ನಿನ್ನೆ ಜಿಲ್ಲಾ ಕೇಂದ್ರವಾಯಿತು. ಅದಕ್ಕೆ ಏನಾದರೂ ವಿಶೇಷ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಿದ್ದರೆ, ಕೇಂದ್ರಸರ್ಕಾರದಿಂದ ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಜಯ್ ಕುಮಾರ್ ಸರ್‌ನಾಯಕ್: ಸನ್ಮಾನ್ಯ ಅಧ್ಯಕ್ಷರೆ, ಗದಗ್ ಕ್ರೀಡಾಂಗಣವನ್ನು ಕೈಗೆತ್ತಿಕೊಂಡಾಗ, ಅದನ್ನು ಮೊದಲು ತಾಲ್ಲೂಕು ಕ್ರೀಡಾಂಗಣಕ್ಕೆ ಒಪ್ಪಿಗೆ ಕೊಡಬೇಕಾಗಿತ್ತು. ಆದರೆ ಅವರು ಇಲ್ಲ ಇನ್ನು ಮುಂದೆ ಜಿಲ್ಲೆ ಆಗುತ್ತದೆ, ಇದನ್ನು ಈಗಾಗಲೇ ಜಿಲ್ಲಾ ಕ್ರೀಡಾಂಗಣವನ್ನಾಗಿ ಮಾಡಿಕೊಳ್ಳುತ್ತೇವೆ ಎಂದು 59 ಲಕ್ಷ ರೂಪಾಯಿಗಳ ಪ್ರಪೋಸಲ್ ಕೊಟ್ಟಿದ್ದರು. ಅದಕ್ಕೆ ನಾವು ಒಂದು ಕಂಡೀಷನ್ ಹಾಕಿದ್ದೆವು. ಅದೇನೆಂದರೆ ಉಳಿದ ಹಣವನ್ನು ನೀವು ಸ್ಥಳೀಯವಾಗಿ ಸಂಗ್ರಹಿಸಿ ಕಟ್ಟುವುದಾದರೆ ನಾವು ಕೊಡುತ್ತೇವೆ ಎಂದು ಹೇಳಿದ್ದೆವು. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅದರ ಪ್ರಕಾರ ಈಗಾಗಲೇ ಸ್ಥಳೀಯವಾಗಿ 23 ಲಕ್ಷ ರೂಪಾಯಿಗಳನ್ನು ಸಂಗ್ರಹಣೆ ಮಾಡಿ. ಆ ಕ್ರೀಡಾಂಗಣ ಮುಗಿಯುವ ಹಂತದಲ್ಲಿ ಇದೆ.

ಅದೂ ಅಲ್ಲದೆ ನಾವು ಏನು ತಾಲ್ಲೂಕು ಕ್ರೀಡಾಂಗಣಕ್ಕೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು, 10 ಲಕ್ಷ ಅಲ್ಲದೆ ಪುನಃ ವಿಶೇಷ ಅನುದಾನಕ್ಕೆ 5 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಈಗಾಗಲೇ ಪೆವಿಲಿಯನ್ ಮುಗಿಯುವ ಹಂತದಲ್ಲಿ ಇದೆ. ಸನ್ಮಾನ್ಯ ಅಧ್ಯಕ್ಷರೆ ಇದರ ಜೊತೆಗೆ ಮಾನ್ಯ ಸದಸ್ಯರು ಹೇಳಿದರು, ಕ್ರೀಡಾಂಗಣವನ್ನು ಇಂಪ್ರೂವ್ ಮಾಡಬೇಕೆಂದು. ನಾವು ಈಗಾಗಲೇ ಗೌರ್ಮೆಂಟ್ ಆಫ್ ಇಂಡಿಯಾಗೆ ಕೆಲವೊಂದು ಪ್ರಪೋಸಲ್ ಸಲ್ಲಿಸಿದ್ದೇವೆ. ಆ ಒಂದು ಯೋಜನೆಯ ಅಡಿಯಲ್ಲಿ ಹಣ ಬಿಡುಗಡೆ ಆದರೆ ಕ್ರೀಡಾಂಗಣವನ್ನು ಇಂಪ್ರೂವ್ ಮಾಡುವುದಕ್ಕೆ ನಾವು ಕ್ರಮತೆಗೆದುಕೊಳ್ಳುತ್ತೇವೆ.

ವಿಷಯ: ಬೆಂಗಳೂರು-ಮಾಗಡಿ-ಕುಣಿಗಲ್ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವುದು.

517 (4038)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು-ಮಾಗಡಿ-ಕುಣಿಗಲ್ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರಕ್ಕಿದೆಯೇ?

ಆ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಇ) ರಾಜ್ಯ ಹೆದ್ದಾರಿಯನ್ನು ನಿರ್ಮಿಸಲು ಸರ್ಕಾರದಿಂದ ಸ್ಪಷ್ಟವಾದ ಮಾರ್ಗ ಸೂಚಿಯಿದೆಯೇ?

ಈ) ಈ ರಸ್ತೆಯ ಅಭಿವೃದ್ಧಿಗೆ ಸರಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು.)

ಅ) ಇರುವುದಿಲ್ಲ. ಬೆಂಗಳೂರಿನಿಂದ ಮಾಗಡಿಯವರೆಗೆ ರಾಜ್ಯ ಹೆದ್ದಾರಿಯಾಗಿರುತ್ತದೆ. ಹಾಗೂ ಮಾಗಡಿಯಿಂದ ರಾಷ್ಟ್ರೀಯ ಹೆದ್ದಾರಿ-48ಕ್ಕೆ ಸೇರುವುದು ಜಿಲ್ಲಾ ಮುಖ್ಯ ರಸ್ತೆ ಆಗಿದೆ.

ಆ) ಈಗಾಗಲೇ ಮಾಗಡಿಯನ್ನು ರಾಷ್ಟ್ರೀಯ ಹೆದ್ದಾರಿ-40 (ಕಿ.ಮೀ. 47) ಸೋಲೂರು ಬಳಿ ಸಂಪರ್ಕಿಸುವ ರಸ್ತೆ ರಾಜ್ಯ ಹೆದ್ದಾರಿಯಾಗಿದ್ದು, ರಾಷ್ಟ್ರೀಯ ಹೆದ್ದಾರಿ-48ರ ಕಿಮೀ. 57ರಲ್ಲಿ ಸಂಪರ್ಕಿಸುವ ಜಿಲ್ಲಾ ಮುಖ್ಯ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಪರಿವರ್ತಿಸುವ ಯೋಜನೆ ಇರುವುದಿಲ್ಲ.